# ನಿಮ್ಮಲ್ಲಿದ್ದರೆ....

1.ರೆಫ್ರಿಜಿರೇಟರ್‌ನಲ್ಲಿ ಆಹಾರ, ಕೆಲವು ಬಟ್ಟೆಬರೆಗಳು, ತಲೆಯ ಮೇಲೊಂದು ಸೂರು, ಮಲಗಲು ಜಾಗ ನಿಮ್ಮಲ್ಲಿದ್ದರೆ,...

- ❑ ನೀವು ಜಗತ್ತಿನ ಮುಕ್ಕಾಲುಭಾಗ ಜನರಿಗಿಂತ ಶ್ರೀಮಂತರು.

2. ಬ್ಯಾಂಕಿನಲ್ಲಿ ಹಣವಿದ್ದು, ಜೇಬಿನಲ್ಲೂ ಇದ್ದು, ನೀವು ಚಿಲ್ಲರೆಯನ್ನೂ ಪರ್ಸಿನಲ್ಲಿರಿಸಿದ್ದರೆ, ...

- ❑ ನೀವು ಜಗತ್ತಿನಲ್ಲಿ ಎಂಟು ಮಾತ್ರವಿರುವ ಧನಿಕರಲ್ಲಿ ಒಬ್ಬರು.

3. ಈ ಬೆಳಿಗ್ಗೆ ನೀವು ಕಾಯಿಲೆಯಿಲ್ಲದೆ ಆರೋಗ್ಯವಾಗಿ ಎದ್ದಿದ್ದರೆ....

- ❑ ಈ ವಾರದೊಳಗೆ ಕೊನೆಯುಸಿರೆಳೆದ ದಶಲಕ್ಷ ಜನರಿಗಿಂತ ಕೃಪಾವಂತರು.

4.ಯುದ್ಧದ ಅಪಾಯವನ್ನು, ಬಂಧನದ ಏಕಾಂತವನ್ನು, ಹಿಂಸೆಯ ತೀವ್ರಯಾತನೆಯನ್ನು, ಹಸಿವಿನ ಕಂಗೆಡುವಿಕೆಯನ್ನು ನೀವು ಎದುರಿಸಿಯೇ ಇಲ್ಲವಾದರೆ,....❑ ನೀವು ಜಗತ್ತಿನ ಐವತ್ತು ಕೋಟಿ ಜನರಿಗಿಂತಲೂ ಮುನ್ನಡೆಲ್ಲಿದ್ದೀರಿ.

5. ಕಾಡುವ, ಬಂಧನದ, ಹಿಂಸೆಯ ಅಥವಾ ಸಾವಿನ ಹೆದರಿಕೆಯಿಲ್ಲದೆ ಒಂದು ಧಾರ್ಮಿಕ ಉತ್ಸವದಲ್ಲಿ ನೀವು ಭಾಗವಹಿಸಬಹುದಾದರೆ,.....

- ❑ ಜಗತ್ತಿನ ಮೂವತ್ತು ಕೋಟಿ ಜನರಿಗಿಂತಲೂ ನೀವು ಭಾಗ್ಯವಂತರು.

6. ನೀವು ಮುಗುಳ್ನಗುತ್ತ ತಲೆ ಎತ್ತಿ ನಡೆಯಬಲ್ಲಿರಾದರೆ, ಅದಕ್ಕಾಗಿ ಕೃತಜ್ಞತೆ ಸೂಸಬಲ್ಲವರಾದರೆ...

- ❑ ನೀವು ಧನ್ಯರು, ಏಕೆಂದರೆ ಹಾಗೆ ಮಾಡಬಲ್ಲವರು ಹಲವರಿದ್ದರೂ ಮುಗುಳ್ನಗೆ ಬೀರಲಾರರು, ಕೃತಜ್ಞತೆಯನ್ನು ವ್ಯಕ್ತಪಡಿಸರು.

7. ಇನ್ನೊಬ್ಬರ ಕೈಯನ್ನು ಪ್ರಾಮಾಣಿಕವಾದ ಪ್ರೀತಿಯಿಂದ ನೀವು ಹಿಡಿಯಬಲ್ಲಿರಾದರೆ, ಅಥವಾ ನಿಜವಾದ ಅನುಭೂತಿಯಿಂದ ಪ್ರೋತ್ಸಾಹಿಸಲು ಅಥವಾ ಸಮಾಧಾನಪಡಿಸಲು ಅವನ ಭುಜವನ್ನು ಸ್ಪರ್ಶಿಸಬಲ್ಲರಾದರೆ....

- ❑ ನೀವು ಧನ್ಯರು ಏಕೆಂದರೆ ನೀವು ಸಂತಯಿಕೆಯ ಹಸ್ತಸ್ಪರ್ಶ ನೀಡಬಲ್ಲಿರಿ.

8. ಕೆಲಸದ ವೇಳೆ ಮುಗಿದ ಬಳಿಕ ನೀವು ಗಾಯಗೊಳ್ಳದೆ, ನೋವುಗೊಳ್ಳದೆ ಮನೆಗೆ ಹಿಂದಿರುಗಬಲ್ಲರಾದರೆ,....

- ❑ ನೀವು ಅದೃಷ್ಟವಂತರು. ಸಾವಿರಾರು ಜನ ಮನೆಗೆ ಹಿಂದಿರುಗುವಾಗ ಸಾಯುತ್ತಾರೆ.

9. ವಕ್ರತೆ ಅಥವಾ ಲೋಪವಿಲ್ಲದೆ ನೀವು ನೋಡಿ, ಕೇಳಿ, ಮಾತಾಡಬಲ್ಲರಾದರೆ,...

- ❑ ಕಣ್ಣು, ಕಿವಿ, ಗಂಟಲು ಸರಿಯಾಗಿ ಕೆಲಸ ಮಾಡದ ಅಥವಾ ವ್ಯಾಧಿಗೆ ಒಳಗಾದ ಲಕ್ಷಾಂತರ ಮಂದಿಗಿಂತ ಸುಖಿಗಳು.

10. ಕುಡಿಯಲು, ಅಡುಗೆ ಮಾಡಲು ಮತ್ತು ಸ್ನಾನ ಮಾಡಲು ಸಾಕಷ್ಟು ನೀರು ನಿಮಗೆ ಸಿಕ್ಕುತ್ತಿದ್ದರೆ,....

- ❑ ಮರುಭೂಮಿಯಲ್ಲಿ ಇರುವ, ಜನದಟ್ಟಣೆಯ ಪಟ್ಟಣಗಳಲ್ಲಿ ನಲ್ಲಿಗಳ ಮುಂದೆ ಸಾಲು ನಿಂತ ಅಥವಾ ಸ್ವಲ್ಪ ನೀರು ತರಲು ಮೈಲುಗಟ್ಟಲೆ ನಡೆಯಬೇಕಾದ ಲಕ್ಷಾಂತರ ಜನಕ್ಕಿಂತ ನೀವು ಅದೃಷ್ಟವಂತರು.

11. ಹಸಿರಿನಿಂದ ಕೂಡಿ ಪರಿಶುದ್ಧ ಪ್ರಶಾಂತ ಪರಿಸರದಲ್ಲಿ ಓದಲು, ನಿದ್ರಿಸಲು ಅಥವಾ ಸುಮ್ಮನೆ ಕಾಲ ಕಳೆಯಲು ನಿಮಗೆ ಸಾಧ್ಯವಿದ್ದರೆ....

- ❑ ಗಲಾಟೆ, ಜನದಟ್ಟಣೆ, ಮಾಲಿನ್ಯಗಳಿಂದ ಕೂಡಿದ ಗೂಡುಗಳಲ್ಲಿ ವಾಸಿಸುವ ವಿಶ್ವದ ಅನೇಕ ಪ್ರದೇಶಗಳ ಲಕ್ಷಾಂತರ ಮಂದಿಗಿಂತ ಭಾಗ್ಯಶಾಲಿಗಳು.

12. ನಿಮ್ಮ ಸಂಕಟದ, ಸಂದಿಗ್ಧದ ಸಮಯಗಳಲ್ಲಿ ನಿಮಗೆ ಆಧಾರವಾಗಿ ನಿಲ್ಲಬಲ್ಲ, ನಿಮ್ಮ ತೊಂದರೆಗಳನ್ನು ತನ್ನ ದೃಷ್ಟಿಯಿಂದಲ್ಲದೆ ನಿಮ್ಮ ದೃಷ್ಟಿಕೋನದಿಂದ ನೋಡಬಲ್ಲ ಯಾರಾದರೂ ಜತೆಗಾರರೊಬ್ಬರಿದ್ದರೆ,...

- ❑ ನಿಮಗೆ ನಿಜವಾದ ಸ್ನೇಹದ ವರ ದೊರೆತಿದೆ. ಇದನ್ನು ಅಸಂಖ್ಯಾತ ಸ್ತ್ರೀಪುರುಷರು ಬಯಸಿ, ಪ್ರಯತ್ನಿಸಿ, ವಿಫಲರಾಗಿದ್ದಾರೆ.

13. ಈ ಬರಹವನ್ನು ನೀವು ಓದಬಲ್ಲವರಾಗಿದ್ದರೆ, ನಿಮಗೆ ಈಗ ಎರಡು ಅನುಗ್ರಹಗಳು ದೊರೆತಿವೆ,...

- ❑ ನಿಮ್ಮ ಒಳಿತಿನ ಬಗ್ಗೆ ಯೋಚಿಸುವ ಯಾರೋ ಒಬ್ಬರು ಇದ್ದಾರೆ, ಮತ್ತು ನೀವು ಓದಲು ಬಾರದ ಇಪ್ಪತ್ತು ಕೋಟಿ ಜನರಿಗಿಂತ ಹೆಚ್ಚು ಕೃಪೆಗೆ ಒಳಗಾದವರು.

**ನಿಮ್ಮ ಭಾಗ್ಯವನ್ನು ಕುರಿತು ಚಿಂತಿಸಿ. ಇರದುದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕಿಂತ ಇರುವುದರ ಮೌಲ್ಯವನ್ನು ಅರಿತುಕೊಳ್ಳಿ. ಒಂದು ಲೋಟದಲ್ಲಿ ನೀರು ಅರ್ಧ ತುಂಬಿದೆ, ಅರ್ಧ ಖಾಲಿ ಇದೆ ಎನ್ನುವುದು ಬರಿಯ ಹೇಳಿಕೆಯಲ್ಲ. ಅದು ನಿಮ್ಮ ಜೀವನ ದೃಷ್ಟಿ.**

*ಅನು: ಎಚ್. ಪಾಂಡುರಂಗವಿಠ್ಠಲ.*